



ಮಾಡುತ್ತಿದೆ. ಜಾನಪದ, ಸಾಂಪ್ರದಾಯಿಕ ಹಾಗೂ ಲಿನೊ ಮಾದರಿಯಲ್ಲಿ ರೇಷ್ಮೆ ಸೀರೆಗಳು ಲಭ್ಯ.

ನೈಸರ್ಗಿಕ ಸೀರೆ ತಯಾರಿಸಲು ದೇಶದ ನಾನಾ ಭಾಗಗಳಲ್ಲಿರುವ ಮ್ಯೂಸಿಯಂ, ಚಿತ್ರಕಲಾ ಕಾಲೇಜುಗಳ ವಿದ್ಯಾರ್ಥಿಗಳಿಂದ ಮಾಹಿತಿ ಸಂಗ್ರಹಿಸಿ, ಹಲವು ಅನ್ವೇಷಣೆಗಳನ್ನು, ಅಧ್ಯಯನ ಸಂಶೋಧನೆಗಳನ್ನು ನಡೆಸಿದ್ದು, ಇದರ ಫಲವಾಗಿ ಚಿತ್ತಾಕರ್ಷಕ ರೇಷ್ಮೆ ಸೀರೆಗಳು ಗ್ರಾಹಕರ ಮನತಣಿಸುತ್ತಿವೆ.

ಜಾನಪದ ಮಾದರಿಯಲ್ಲಿ ಚೋಳ, ಕಳಿಂಗ, ವಿಜಯನಗರ ಅರಸರ ಸಾಂಪ್ರದಾಯಿಕ ಪದ್ಧತಿಗಳನ್ನು ಸೀರೆಯಲ್ಲಿ ಒಡಮೂಡಿಸಲಾಗಿದೆ. ಮೈಸೂರಿನ ಅಂಬಾವಿಲಾಸ ಅರಮನೆಯ ಗೋಡೆಯಲ್ಲಿ, ಕಂಬಗಳಲ್ಲಿರುವ ಕೃಷ್ಣನ ಚಿತ್ರ, ದಸರಾ ಆನೆಯ ಚಿತ್ರವನ್ನು ಸೀರೆಯ ಸೆರಗು ಹಾಗೂ ಬಾರ್ಡರ್‌ನಲ್ಲಿ ಯಥಾವತ್ ಚಿತ್ರಿಸಲಾಗಿದ್ದು ಬಹಳ ಆಕರ್ಷಕವಾಗಿದೆ. ಮಲೆನಾಡು ಪ್ರಾಂತ್ಯದ ಹಸೆ ಚಿತ್ತಾರ, ಬಳ್ಳಾರಿ ಭಾಗದ ಬುಡಕಟ್ಟು ಜನಾಂಗದವರ ಬದುಕಿನ ಚಿತ್ರಣವನ್ನು ಕಾಂಜೀವರಂ ಸೀರೆಯಲ್ಲಿ ಚಿತ್ರಿಸಲಾಗಿದೆ. ಲಿನೊ ಮಾದರಿಯ ಸೀರೆಗಳು ಯುವತಿಯರಿಗಾಗಿ ವಿಶೇಷವಾಗಿ ರೂಪಿಸಲಾಗಿದೆ. ಇದು ಸಾಮಾನ್ಯ ರೇಷ್ಮೆ ಸೀರೆಗಿಂತ ಶೇ.40ರಷ್ಟು ಹಗುರವಾಗಿದೆ.

'ಇಂದಿನ ಆಧುನಿಕ ಮನೋಭಾವದ ಹುಡುಗಿಯರು ಹಗುರವಾದ, ಗಾಢ ವರ್ಣದ ರೇಷ್ಮೆ ಸೀರೆಯನ್ನೇ ಇಷ್ಟಪಡುತ್ತಾರೆ. ಮದುವೆಯ ನಿಶ್ಚಿತಾರ್ಥ, ಮದುವೆ ದಿನವೂ ಮದುಮಗಳಿಗೆ ಇಂಥ ಕಡುಬಣ್ಣದ ರೇಷ್ಮೆ ಸೀರೆಗೇ ಆದ್ಯತೆ. ನೈಸರ್ಗಿಕ ಬಣ್ಣ ಬಳಸಿ ಅಪ್ಪಟ ರೇಷ್ಮೆ ದಾರದಲ್ಲಿ ನೇಯ್ದ ಥೀಮ್ ಆಧಾರಿತ ಸೀರೆಗಳು ಇಂದು ಹೆಚ್ಚು ಬೇಡಿಕೆ ಗಳಿಸುತ್ತಿವೆ' ಎಂದು ಹೇಳುತ್ತಾರೆ ಆರ್‌ಎಂಕೆವಿ ಸೀರೆ ಮಳಿಗೆಯ ಮಾಲೀಕ ಶಂಕರ್ ಕುಮಾರಸ್ವಾಮಿ.

'ಅಷ್ಟೇ ಅಲ್ಲದೆ 22ರಿಂದ 50 ವರ್ಷದೊಳಗಿನ ಮಹಿಳೆಯರು ಸಹ ವೈವಿಧ್ಯಮಯ ರೇಷ್ಮೆ ಸೀರೆಯನ್ನೇ ಇಷ್ಟಪಡುತ್ತಾರೆ. ಅಲ್ಲದೆ ಹಬ್ಬಹರಿದಿನಗಳಿಗಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಲಾದ ರೇಷ್ಮೆ ಸೀರೆಗಳನ್ನು ನೈಸರ್ಗಿಕ ಬಣ್ಣದಿಂದಲೇ ತಯಾರಿಸಲಾಗಿದೆ. ನಮ್ಮ ದೇಶ ಅಷ್ಟೇ ಅಲ್ಲದೆ ಇಂಡೊನೇಷ್ಯಾ, ಥಾಯ್ಲೆಂಡ್ ಮುಂತಾದ ದೇಶಗಳ ಜನಜೀವನವನ್ನು ಬಿಂಬಿಸುವ ಚಿತ್ರಗಳನ್ನು ಸೀರೆಯಲ್ಲಿ ತರಲಾಗಿದ್ದು, ವಿನ್ಯಾಸ ಆಕರ್ಷಕವಾಗಿದೆ' ಎನ್ನುತ್ತಾರೆ ಅವರು.

## ಹಳೆಯ ಚಿತ್ತಾರ; ಹೊಸ ಸ್ಪರ್ಶ

ನ್ಯಾಚುರಲ್ ಡೈ ಬಳಸಿ ತಯಾರಿಸಿರುವ 'ಥೀಮ್ ಓರಿಯಂಟೆಡ್' ಸೀರೆಗಳು ಸುಮಾರು 400 ವರ್ಷಗಳಿಗೂ ಹಿಂದಿನ ಚಿತ್ತಾರವನ್ನು ಸೀರೆಯಲ್ಲಿ ತಂದಿರುವಂಥವು. ಜಾನಪದ ಶೈಲಿಯಲ್ಲಿ, ನೈಸರ್ಗಿಕ ಬಣ್ಣ ಬಳಸಿ ನೇಯ್ದ ರೇಷ್ಮೆ ಸೀರೆಗಳು, ಮೈಸೂರಿನ ಅಂಬಾವಿಲಾಸದಲ್ಲಿ ಗೋಡೆಯ ಮೇಲೆ ಕೆತ್ತಿರುವ ಶ್ರೀಕೃಷ್ಣನ ಚಿತ್ರವನ್ನು ರೇಷ್ಮೆ ಸೀರೆಯಲ್ಲಿ ಚಿತ್ರಿಸಲಾಗಿದೆ. ಹಸೆ ಚಿತ್ತಾರ ಮಲೆನಾಡಿನ ವೈಭವವನ್ನು ಬಿಂಬಿಸುವಂಥದ್ದು. ಗೋಡೆಗಳ ಮೇಲೆ ಕೆತ್ತಿರುವ ಚಿತ್ತಾರವನ್ನು ಸೀರೆಯಲ್ಲಿ ತಂದಿದ್ದೇ ನೇಕಾರರ ನೈಪುಣ್ಯಕ್ಕೆ ಸಾಕ್ಷಿ.

ಇಂಡೊನೇಷ್ಯಾದ ಜಾನಪದ ಕಲೆ 'ಮಿನಾಕಬು'. ಇದನ್ನು ವೇಲ್ವಾರಿ ಸಿಲ್ಕ್ ಸೀರೆ ಮೇಲೆ ಮೂಡಿಸಲಾಗಿದೆ. ಇದು ಅಲ್ಲಿನ ಬುಡಕಟ್ಟು ಜನಾಂಗದ ಕಲೆಯಾಗಿದ್ದು ಸುಮಾರು 500 ವರ್ಷಗಳಷ್ಟು ಹಳೆಯದು. ಇದನ್ನು 'ಕೊರ್ವಿ' ತಂತ್ರಗಾರಿಕೆ ಬಳಸಿ ಚಿತ್ರಿಸಲಾಗಿದೆ. ಹಾಗೆಯೇ ಥಾಯ್ಲೆಂಡ್‌ನ ಜಾನಪದ ಕಲೆ 'ಲಾಯ್ ಥಾಯ್' ರೇಷ್ಮೆ ಸೀರೆಯ ಮೇಲೆ ಚಿತ್ರಿಸಿದ್ದು, ಇದು ಸಂತೋಷದ ಜನಜೀವನದ ಪ್ರತಿಬಿಂಬದಂತಿದೆ.

ಹೆರಿಟೇಜ್ ಸಂಗ್ರಹದಲ್ಲಿ ಪೈಠಣಿ ರೇಷ್ಮೆ ಸೀರೆ ನೈಸರ್ಗಿಕ ಬಣ್ಣ ಬಳಸಿ ನೇಯ್ದ ಸೀರೆಗಳಾಗಿದ್ದು, ಇದರಲ್ಲಿ ಕಾಂಜೀವರಂ ಸೀರೆಗಳೂ ಲಭ್ಯ. ಕಮಲದ ವಿನ್ಯಾಸ ಹಾಗೂ ಬುಟ್ಟಾ ಇರುವ ಸೀರೆ ಆಕರ್ಷಕವಾಗಿದೆ. ಇದರ ಜೊತೆಗೆ ಸಾಂಪ್ರದಾಯಿಕ ಮಿನಾಕರಿ ಸೀರೆ, ಚಿನ್ನದ ಜರಿಯನ್ನು ಬಳಸಿ ಮಾಡಿದ 'ಟೆಂಪಲ್ ವಿನ್ಯಾಸ'ದ ಸೀರೆ ಅದ್ದೂರಿಯಾಗಿ ಕಾಣಿಸಿಕೊಳ್ಳಲು ಇಷ್ಟಪಡುವ ಮಹಿಳೆಯರಿಗೆ ಸೂಕ್ತವಾಗಿದೆ.

'ವಿವಾ ಮೆಜೆಂಟ' ಸೀರೆ ಲಿನೊ ಮಾದರಿಯಲ್ಲಿದ್ದು, 'ಸ್ಯಾರಿ ಆಫ್ ದಿ ಇಯರ್' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮದುವೆ ಸೀರೆಗಳು 35 ಸಾವಿರ ರೂಪಾಯಿ ಮೇಲ್ಪಟ್ಟು ಬೆಲೆಗೆ ಸಿಗುತ್ತವೆ. ಕಾಂಜೀವರಂ ರೇಷ್ಮೆ ಸೀರೆಯ ಅಂಚು ಹಾಗೂ ಸೆರಗಿನಲ್ಲಿ ಚಿನ್ನದ ದಾರ ಬಳಸಿ ಮಾಡಿದ ಕಸೂತಿ ಇದೆ. ಈ ಸೀರೆಗಳಿಗೆ ಬೇಡಿಕೆಯೂ ಹೆಚ್ಚಿದೆ.

## ರಾಸಾಯನಿಕ ಮುಕ್ತ

ನೈಸರ್ಗಿಕ ಬಣ್ಣಗಳು ವಿಷಕಾರಿ ರಾಸಾಯನಿಕಗಳಿಂದ ಮುಕ್ತವಾದಂಥವು. ಇದು ನೈಸರ್ಗಿಕ ಬಣ್ಣಗಳ ಬಳಕೆಯ ಪ್ಲಸ್‌ಪಾಯಿಂಟ್. ರಾಸಾಯನಿಕ ಮುಕ್ತ ಬಣ್ಣ ಬಳಸುವುದರಿಂದ ಚರ್ಮ ಸಂಬಂಧಿ ಸಮಸ್ಯೆಗಳಿಂದ ದೂರವಿರಬಹುದು. ಇಂದು ಮಾರುಕಟ್ಟೆಯಲ್ಲಿ ಲಭ್ಯವಿರುವ ಕೃತಕ ಬಣ್ಣಗಳು ಹಾನಿಕಾರಕ ರಾಸಾಯನಿಕಗಳನ್ನು ಒಳಗೊಂಡಿವೆ. ಈ ಬಣ್ಣಗಳಲ್ಲಿ ಕೆಲವು ಸೂರ್ಯನ ಅತಿನೇರಳೆ ಕಿರಣಗಳ ವಿರುದ್ಧ ರಕ್ಷಣೆ ನೀಡುವಲ್ಲಿ ಅಸಮರ್ಥವಾಗಿರುತ್ತವೆ. ಆದರೆ ನೈಸರ್ಗಿಕ ಬಣ್ಣಗಳು ಸೌಮ್ಯವಾಗಿದ್ದು, ಅಲರ್ಜಿಯಾಗದಂತೆ ತಡೆಯುತ್ತವೆ. ಅಲ್ಲದೆ ನೈಸರ್ಗಿಕ ಬಣ್ಣ ಎಲ್ಲೇ ಬಳಸಿದರೂ ಅದು ಪರಿಸರಸ್ನೇಹಿಯಾಗಿಯೇ ಇರುತ್ತದೆ.

ಕೃತಕ ಬಣ್ಣ ಚರ್ಮಕ್ಕೆ ಹಾನಿಕರ. ಜಲಮಾಲಿನ್ಯವನ್ನೂ ಉಂಟು ಮಾಡುತ್ತದೆ. ಮಣ್ಣು, ಜಲಚರಗಳಿಗೂ ಇದು ಹಾನಿ ಉಂಟುಮಾಡುತ್ತದೆ.